ಶ್ರೀ ಎಂ. ರಘುಪತಿ(ವಿದ್ಯಾ ಮಂತ್ರಿಗಳು).—

ಅ) ಕ್ಯಾಪಿಟೇಶನ್ : ಡೊನೇಶನ್ ಶುಲ್ಕವನ್ನು ರದ್ದು ಮಾಡಿದ್ದರಿಂದ, ಕಾಲೇಜನ್ನು ಸರಕಾರ ವಹಿಸಿಕೊಳ್ಳುವಂತೆ ಕೇಳಿಕೊಂಡಿದೆ.

ಆ) ಇಲ್ಲ.

ಶಿಕ್ಷಣ ಇಲಾಖೆಯಲ್ಲಿನ ರಾಜ್ಯ ಪತ್ರಾಂಕಿತ ಅಧಿಕಾರಿಗಳು.

೩೧೩. ಶ್ರೀ ಆರ್. ಎನ್. ನಾಯ್ಕ(ಭಟ್ಕಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟಿಗೆ ಎಷ್ಟು ರಾಜ್ಯ ಪತ್ರಾಂಕಿತ ಅಧಿಕಾರಿಗಳು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ?

ಆ) ಆ ಪೈಕಿ, ಎಷ್ಟು ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆಯವರು ?

ಶ್ರೀ ಎಂ. ರಘುಪತಿ(ಶಿಕ್ಷಣ ಸಚಿವರು).—

ಅ) ೧೫೫.

ಆ) ೫೯.

ಪ್ರೌಢಶಾಲೆಗಳಲ್ಲಿ ಪ್ರವೇಶಾವಕಾಶ ದೊರಕಿಸಿ ಕೊಡುವುದು.

೭೮೯. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಜನ ಗಿರಿಜನ ಪ್ರೌಢಶಾಲೆಗಳಲ್ಲಿ ಹರಿಜನ ಗಿರಿಜನರಲ್ಲದವರ ದಾಖಲಾತಿಯು ಒಟ್ಟು ದಾಖಲಾತಿಯ ಶೇಕಡಾ ೫೦ ರಷ್ಟನ್ನು ಮೀರಾಬಾರದೆನ್ನುವ ದೃಷ್ಟಿಯಿಂದ ಸ್ಥಳೀಯ ಇತರೇ ಬಡ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನಿರಾಕರಿಸುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಆ ರೀತಿಯ ತಾರತಮ್ಯವನ್ನು ಹೋಗಲಾಡಿಸಲು ಸರಕಾರದವರು ಕೈಗೊಳ್ಳುವ ಕ್ರಮವೇನು?

ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿಗಳು).—

ಅ) ನಿಜವಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡದಲ್ಲಿ ಅರಣ್ಯ ಕಾಲೇಜಿನ ಸ್ಥಾಪನೆ.

೯೫೯. ಶ್ರೀ ಚಂದ್ರಕಾಂತ ಬೆಲ್ಲದ(ಧಾರವಾಡ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ ?

ಅ) ಧಾರವಾಡದಲ್ಲಿ ಅರಣ್ಯ ಕಾಲೇಜನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಜೀವಿಜಯ(ಕೃಷಿ ರಾಜ್ಯ ಮಂತ್ರಿಗಳು).—

ಅ) ಧಾರವಾಡದಲ್ಲಿ ಅರಣ್ಯ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಇಲ್ಲ. ಕೃಷಿ ಕಾಲೇಜಿನಲ್ಲಿ ಶೈಕ್ಷಣಿಕ ವರ್ಷ ೧೯೮೫-೮೬ ರಿಂದ ನಾಲ್ಕು ವರ್ಷದ ಬಿ.ಎಸ್.ಸಿ. (ಅರಣ್ಯ) ಡಿಪ್ಲೋಮಾ ಕೋರ್ಸ್‌ನ್ನು ಕೃಷಿ ವಿಶ್ವವಿದ್ಯಾನಿಲಯವು ಪ್ರಾರಂಭಿಸಲು ಸರ್ಕಾರದ ಒಪ್ಪಿಗೆಯಷ್ಟನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ತಿಳಿಸಲಾಗಿದೆ.